ಶ್ರೀ ಎಸ್ ಎಂ. ಗುರೆಡ್ಡಿ:—ಸಿದ್ದಾಪುರದಲ್ಲಿ ಕಟ್ಟುವುದರಿಂದ—ನಾರಾಯಣಪುರದಲ್ಲಿ ಎಷ್ಟು ನೀರನ್ನು ಇಂಪೌಂಡ್ ಮಾಡಬಹುದೋ ಅದಕ್ಕಿಂತಲೂ ಹೆಚ್ಚು ನೀರನ್ನು ಇಂಪೌಂಡ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಾರಾಯಣಪುರದ ಮತ್ತು ಸಿದ್ದಾಪುರದ ಪ್ರಾಜೆಕ್ಟ್‌ನ ಮಟ್ಟ ಎಷ್ಟು ಎಂಬುದು ಮಾನ್ಯನದನ್ಯರಿಗೆ ಗೊತ್ತಿದೆ.

ಶ್ರೀ ಆರ್. ಎಸ್. ಪಾಟೀಲ್.—6 ಕೋಟಿ ರೂಪಾಯಿ ಉಳಿತಾಯವಾಗುತ್ತದೆ ಎಂದು ಹೇಳಿದಿರಿ, ಇದು ಎಷ್ಟು ಕಾಲದಲ್ಲಿ ಆಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಸ್. ಎಂ. ಕೃಷ್ಣ.—ಈ ದೇಶದಲ್ಲಿ ಗುದ್ದಲಿವಾಗಿರತಕ್ಕ ತುರ್ತುಪರಿಸ್ಥಿತಿಯ ದೆಶೆಯಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿರತಕ್ಕ ಹಲವಾರು ಭಾರಿ ನೀರಾವರಿ ಯೋಜನೆಗಳನ್ನು ನದ್ಯಕ್ಕೆ ಕೈ ಬಿಡಬೇಕೆನ್ನತಕ್ಕ ಅಭಿಪ್ರಾಯ ಕೇಂದ್ರಸರ್ಕಾರಕ್ಕಾಗಲಿ ಅಥವಾ ಯೋಜನಾ ಕಮಿಷನ್ ಅವರಿಗಾಗಲಿ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿಯವರೆಗೂ ಬಂದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ಲಾನಿಂಗ್ ಕಮಿಷನ್ ಅವರು ಮುಂಜೂರಾತಿ ಕೊಡಬಹುದು ಎಂದು ಹೇಳಿ ನಾರಾಯಣಪುರದಲ್ಲಿ ಕೆಲಸ ಶುರು ಮಾಡಬೇಕು ಎಂದು ಹೇಳಿ ಹಣವನ್ನೂ ಕೂಡ ತೆಗೆದಿಟ್ಟಮೇಲೆ ಪ್ಲಾನಿಂಗ್ ಕಮೀಷನ್ ಮೆಂಬರ್ ಆದವರು ದೊಡ್ಡ ಇಂಜನಿಯರಾಗಿ ಸಿದ್ದಾಪುರದಲ್ಲಿ ಮಾಡಬೇಕೆಂದು ಮಾಡಿದ್ದಾರೆ. ಈ ಕೆಲಸ ತೆಗೆದುಕೊಳ್ಳಲಕ್ಕೆ ಯಾವ ಆತಂಕ ಇದೆ ?

ಶ್ರೀ ಎಸ್. ನಿಜಲಿಂಗಪ್ಪ.—ತಜ್ಞರು ನೋಡಿ ಪರೀಕ್ಷೆ ಮಾಡಿ ಯಾವುದು ಸರಿ ಎಂಬುದನ್ನು ಹೇಳುತ್ತಾರೆ. ಅದು ಸಾಧಾರಣವಾಗಿ ಇರತಕ್ಕ ಪದ್ಧತಿ, ಅದನ್ನನುಸರಿಸಿ ಕೆಲಸ ಮಾಡಬೇಕಾಗುತ್ತದೆ. ಈಗ ಮುಂಜೂರಾಗಿರತಕ್ಕ ಕೆಲಸ ತೆಗೆದುಕೊಳ್ಳಲಕ್ಕೆ ಸ್ವಲ್ಪ ತಡ ಆಗಿದೆ.

Minerals available in Krishnarajpet Taluk

*Q.—65. Sri N. NANJE GOWDA (Krishnarajpet).—

Will the Government be pleased to state:—

(*a*) the Minerals that are available in Bellibettada Kavalu, Hemagiri, Siddalakallu, Bellibetta in Krishnarajapet Taluk;

(*b*) the names of minerals and the quantity available in these places;

(*c*) whether they have taken any action to utilise these minerals ?

A.—Sri MAQSOOD ALI KHAN (Deputy Minister for Mines and Geology).—

(*a*) No mineral of any commercial value has been reported in the areas comprising these villages, though stray occurrences of kyanite, corundum, soapstone and traces of gold are found.

(*b*) The names of minerals that occur are mentioned under reply to clause (*a*) above. As for quantities, none of the above minerals occur in abundance and are not considered worthy of economic exploitation.

(*c*) No action is called for in the matter of utilisation of these minerals for reasons stated in reply to clause (*b*) above.

ಶ್ರೀ ಎನ್. ನಂಜೇಗೌಡ.—ಈ ಖನಿಜಗಳನ್ನು ಎಷ್ಟನೇ ಇಸವಿಯಲ್ಲಿ ಸರ್ವೆ ಮಾಡಲಾಯಿತು ?

Sri MAQSOOD ALI KHAN.—In 1924.

ಶ್ರೀ ಎನ್. ನಂಜೇಗೌಡ.—1924 ನೇ ಇಸವಿಯಲ್ಲಿ ಸರ್ವೇ ಮಾಡಿದ ನಂತರ ಮತ್ತೆ, ಪುನಃ ಈಗ ಸರ್ವೆ ಮಾಡಿಲ್ಲ ಅಲ್ಲವೇ ?

Sri MAQSOOD ALI KHAN.—So far as gold is concerned, in 1915 there were workings by John Taylors. In 1924 we surveyed geologically the whole taluk and again last year intensive survey was taken up for kyanite and corundum. There were only stray occurences and no valuable grade was found.

ಶ್ರೀ ಎನ್. ನಂಜೇಗೌಡ.—ಇಲ್ಲ ದೊಡ್ಡದಾದ ಇಂಡಸ್ಟ್ರೀಸನ್ನು ತೆರೆಯದಿದ್ದರೂ ಸಣ್ಣ ಸಣ್ಣ ಇಂಡಸ್ಟ್ರೀಸನ್ನು ತೆರೆಯುವುದಕ್ಕೆ ಅವಕಾಶವಿದೆಯಲ್ಲವೇ ?

Sri MAQSOOD ALI KHAN.—I do not think that this question arises so far as minerals are concerned.

Raising the water level of Kanva Project.

*Q.—76. Sri T. MADAIAH GOWDA (Ramanagaram).—

Will the Government be pleased to state :—

(*a*) whether any representation is made to Government to raise the water level of the Kanva Project ; and if so, when ; and by whom ;

(*b*) whether is it a fact that measurements are taken to raise it by several contours ;

(*c*) how many acres are going to be submerged and the number of persons who would be affected by raising the same at diffrent contours ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Preliminary investigations are being conducted.

(*c*) The matter is still under investigation.

ಶ್ರೀ ಟಿ. ಮಾದಯ್ಯಗೌಡ.—ಕಣ್ವಾ ಕೆರೆ ನೀರಿನ ಮಟ್ಟವನ್ನು ಹೆಚ್ಚಿಸುವ ವಿಚಾರದಲ್ಲಿ ಯಾವ ಮನವಿಯೂ ಬಂದಿಲ್ಲ ಎಂದು ಹೇಳಿದ್ದೀರಿ, ಹಾಗಿರುವ ಪಕ್ಷಕ್ಕೆ ಸರ್ಕಾರದವರೇ ತಮ್ಮ ಸ್ವಂತ ಇನಿಷಿಯೇಟೀವ್‌ನಿಂದ ಈ ಕೆಲಸ ಪ್ರಾರಂಭ ಮಾಡುತ್ತಾರೆಯೇ ? ಹಾಗೆ ಮಾಡುವುದಕ್ಕೆ ಕಾರಣವೇನು ?

† ಶ್ರೀ ಆಲೂರು ಹನುಮಂತಪ್ಪ.—ಕಣ್ವಾ ಜಲಾಶಯಕ್ಕೆ ಹೆಚ್ಚು ನೀರನ್ನು ನೆಪ್ಪೈ ಮಾಡತಕ್ಕ ಒಂದು ಫೀಡರ್ ನಾರೆ ಮಾಡಬೇಕೆಂಬ ಬಗ್ಗೆ ಮತ್ತು ನೀರು ಸಾಕಾಗುತ್ತಾ ಇಲ್ಲ ಎಂಬ ಬಗ್ಗೆ ಚನ್ನಪಟ್ಟಣ ರೈತರ ಕಾನ್‌ಫರೆನ್ಸ್, ರಾಮನಗರ ರೈತರ ಕಾನ್‌ಫರೆನ್ಸ್‌ಗಳಲ್ಲಿ ಕೆಲವು ಮನವಿಗಳು ಬಂದಿವೆ ಮತ್ತು ಅಸೆಂಬ್ಲಿ ಸದಸ್ಯರುಗಳೂ ಕೂಡ ಅದನ್ನು ಹೇಳಿದ್ದಾರೆ. ಆ ವಿಷಯವನ್ನು ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ.

ಶ್ರೀ ಟಿ. ಮಾದಯ್ಯಗೌಡ.—ನನ್ನ ಮೊದಲನೆಯ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಡಲಾಗಿದೆಯಲ್ಲಾ ?

ಶ್ರೀ ಆಲೂರು ಹನುಮಂತಪ್ಪ.—ಕಣ್ವಾ ಜಲಾಶಯದ ಮಟ್ಟವನ್ನು ಹೆಚ್ಚು ಮಾಡತಕ್ಕ ಪ್ರಶ್ನೆ ಇಲ್ಲ. ಆದಕ್ಕೆ ಫೀಡರ್ ಚಾನರ್ ಮಾಡಬೇಕೆಂಬ ಮನವಿ ಚನ್ನಪಟ್ಟಣ ರೈತರ ಕಾನ್‌ಫರೆನ್ಸ್‌ನಲ್ಲಿ, ರಾಮನಗರ ರೈತರ ಕಾನ್‌ಫರೆನ್ಸ್‌ನಲ್ಲಿ ಮತ್ತು ಎಂ.ಎಲ್.ಎ. ಆದ ಶ್ರೀಮಾನ್ ಬಿ.ಜಿ. ಲಿಂಗೇಗೌಡರಿಂದ ಮನವಿಗಳು ಬಂದಿವೆ. ಅವರ ಸಲಹೆಗಳನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ, ಇನ್‌ವೆಸ್ಟಿಗೇಷನ್ ಸಹ ಮಾಡುತ್ತಾ ಇದ್ದೇವೆ, ಮಂಚನಬೆಲೆಯಿಂದ ಫೀಡರ್ ನಾರೆ ಮಾಡಿದರೆ ಎಷ್ಟುಮಟ್ಟಿಗೆ ಅನುಕೂಲವಾಗುತ್ತದೆ ಎಂಬುದನ್ನೂ ಸಹ ಪರಿಶೀಲನೆ ಮಾಡಲಾಗುತ್ತಿದೆ.